- ಕರ್ನಾಟಕ ರಾಜ್ಯ ಸರ್ಕಾರದ ನಿಯಮದಂತೆ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನೀಡುವುದು; 2023–24ರಲ್ಲಿ ಸರ್ಕಾರ ನಿರ್ಧರಿಸಿದಂತೆ ಈ ಕೆಳಗಿನಂತೆ ವಿವಿಧ ಕಾರ್ಮಿಕರಿಗೆ ಕನಿಷ್ಠ ವೇತನ ಕೊಡಬೇಕಾಗಿದೆ;

| ಕ್ರ. ಸಂ. | ಕಾರ್ಮಿಕ ವರ್ಗ | ಮೂಲ ವೇತನ | ಡಿ.ಎ. | ಒಟ್ಟು | ದಿನಗೂಲಿ |
|---|---|---|---|---|---|
| 1 | ಕೌಶಲ್ಯ ರಹಿತ | 10,010 | 2,837 | 12,847 | 495 |
| 2 | ಅರೆ–ಕೌಶಲ್ಯರು | 11,011 | 2,837 | 13,848 | 533 |
| 3 | ಕೌಶಲ್ಯರು | 12,112 | 2,837 | 14,949 | 575 |
| 4 | ಹೆಚ್ಚು ಕೌಶಲ್ಯರು | 13,323 | 2,837 | 16,161 | 622 |

- ಕಾರ್ಮಿಕರು ಕೆಲಸಕ್ಕೆ ಹಾಜರಾದ ವಿವರಗಳನ್ನು ದಿನಾಂಕವಾರು ನಿರ್ವಹಿಸಬೇಕು ಹಾಗೂ ಅದಕ್ಕಾಗಿ ವಿಶೇಷ ಲೆಡ್ಜರ್ ಅನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು;
- ಕೆಲಸದ ಸ್ಥಳದಲ್ಲಿ ಕಾರ್ಮಿಕರಿಗೆ ಸುರಕ್ಷತೆ ಕ್ರಮಗಳನ್ನು ಕಲ್ಪಿಸಬೇಕು.



## ದಾಖಲೆಗಳ ನಿರ್ವಹಣೆ

- ಸಹಕಾರ ಸಂಘಗಳು ಸಹಾಯಕ ನಿಬಂಧಕರು, ಕಾಡಾ ಟಿ.ಬಿ.ಪಿ, ಕಛೇರಿಯು ನೀಡಿದ ನೋಂದಣಿ ಪತ್ರವನ್ನು ಸಂಘಗಳು ಹೊಂದಿರಬೇಕು;
- ನೀರಿನ ನಿರ್ವಹಣೆಗಾಗಿ ಕೆಎನ್ಎನ್ಎಲ್‌ನ ಕಾರ್ಯನಿರ್ವಾಹಕ ಇಂಜಿನಿಯರ್ ಅವರೊಂದಿಗೆ ಎಂಓಯು ಮಾಡಿಕೊಂಡಿರಬೇಕು ಮತ್ತು ಎಂಓಯು ಪ್ರತಿಯನ್ನು ಸಂಘದಲ್ಲಿ ಇಟ್ಟಿರಬೇಕು;
- ಸಂಘದ ಹಣಕಾಸು ವಹಿವಾಟಿನ ಆಡಿಟ್ ಮಾಡಿರಬೇಕು, ಅವುಗಳ ಪ್ರತಿಗಳನ್ನು ಹೊಂದಿರಬೇಕು;
- ಕ್ಯಾಡ್ ಪ್ಯಾಕೇಜ್‌ಗಳಿಗಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು;
- ಸಂಘದ ಆಡಳಿತಾತ್ಮಕ ಕೆಲಸಗಳನ್ನು ನಿರ್ವಹಿಸಲು ಪ್ರತಿ ಸಂಘದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇರಬೇಕು;
- ಸಂಘಗಳು ಪ್ಯಾನ್ ಕಾರ್ಡ್, ಜಿ.ಎಸ್.ಟಿ. ಸಂಖ್ಯೆ ಮತ್ತು ಟಾನ್ ಕಾರ್ಡ್ ಹೊಂದಿರಬೇಕು.



## ನೀರು ಬಳಕೆದಾರರ ಸಹಕಾರ ಸಂಘಗಳಲ್ಲಿ ಮನವಿ;

ರಾಜ್ಯದ ಯಾವ ಸಂಘಗಳಿಗೂ ದೊರೆಯದಂತಹ ಅವಕಾಶ ನಿಮಗೆ ಲಭಿಸಿದೆ. ನಿಮ್ಮ ಸಂಘದ ವ್ಯಾಪ್ತಿಯ ಮಡಿಗಾಲುವೆಗಳಿಗೆ ಸಿಮೆಂಟ್ ಲೈನಿಂಗ್ ಮಾಡಿಕೊಳ್ಳುವ ಸದವಕಾಶ ಹಾಗೂ ನಿಮ್ಮ ಸಂಘಕ್ಕೊಂದು ಶಾಶ್ವತ ಕಟ್ಟಡ ನಿರ್ಮಿಸಿಕೊಳ್ಳುವ ಚಟುವಟಿಕೆ ನಿಮ್ಮದಾಗಿದೆ. ಇದನ್ನು ಸಮಯಮಿತಿಯಲ್ಲಿ ಬಳಸಿಕೊಳ್ಳುವುದು ನಿಮ್ಮ ಕೈಯಲ್ಲೇ ಇದೆ. ಯಾವ ಗುತ್ತಿಗೆದಾರರನ್ನೂ ಅಲಂಬಿಸದೆ ನೀವೇ ಕಾಮಗಾರಿ ಮಾಡಿಕೊಳ್ಳಬಹುದು. ಇಂತಹ ಅವಕಾಶವನ್ನು ಸರ್ಕಾರ, ಎಡಿಬಿ ಮತ್ತು ನಿಗಮವು ಒದಗಿಸಿಕೊಟ್ಟಿದೆ. ಇದನ್ನು ಸಂಪೂರ್ಣವಾಗಿ ಬಳಸಿಕೊಳ್ಳಿ.

ನಿಮಗೆ ಅಗತ್ಯವಿರುವ ತಾಂತ್ರಿಕ ಮಾಹಿತಿ, ವಿನ್ಯಾಸಗಳು, ನಕ್ಷೆಗಳು, ಗುಣಮಟ್ಟ ಪರಿವೀಕ್ಷಣೆ, ತರಬೇತಿ ಮುಂತಾದುವನ್ನು ಸಕಾಲದಲ್ಲಿ ನೀಡಲು ನಿಗಮ ಹಾಗೂ ಇಜಿಐಎಸ್ ಸಿಬ್ಬಂದಿಗಳು ಸಿದ್ಧರಿದ್ದಾರೆ.

ಈ ಕಾಮಗಾರಿಗಳನ್ನು ನಿರ್ವಹಿಸಲು ಪ್ರೊಕ್ಯೂರ್‌ಮೆಂಟ್ ನಿಯಮಾವಳಿಗಳನ್ನು ಅನುಸರಿಸುವುದು ಕಡ್ಡಾಯ. ಅದರ ಬಗ್ಗೆ ಈ ಕರಪತ್ರವು ಮಾಹಿತಿ ಒದಗಿಸುತ್ತದೆ.


### ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಕರ್ನಾಟಕ ನೀರಾವರಿ ನಿಗಮ ನಿ.**
ಯೋಜನಾ ಅನುಷ್ಠಾನ ಕಛೇರಿ, ಮುನಿರಾಬಾದ್, ಕೊಪ್ಪಳ–583233

**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ತುಂಗಭದ್ರಾ ಯೋಜನೆ, ಮುನಿರಾಬಾದ್, ಕೊಪ್ಪಳ–583233

**ಯೋಜನಾ ಸಹಾಯಕ ಸಮಾಲೋಚಕ ತಂಡ**
ಇಜಿಐಎಸ್, ನಂ 87, ಸೀತಾ ಕುಂಜ, 5ನೇ ಅಡ್ಡರಸ್ತೆ,
ಮೃತ್ಯುಂಜಯನಗರ, ಹೊಸಪೇಟೆ–583201, ವಿಜಯನಗರ ಜಿಲ್ಲೆ


ADB

egis India


ಶ್ರೀ ನಂಜುಂಡೇಶ್ವರ ಪ್ರಿಂಟರ್ಸ್, ಬೆಂಗಳೂರು–10


ಕರ್ನಾಟಕ ಸರ್ಕಾರ

# ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ

## ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ



## ಸಂಘಗಳ ಕಾಡಾ ಕಾಮಗಾರಿ (ಕ್ಯಾಡ್ ಪ್ಯಾಕೇಜ್) ಖರೀದಿ ಪ್ರಕ್ರಿಯೆಗಳು (ಪ್ರೊಕ್ಯೂರ್‌ಮೆಂಟ್ ವಿಧಾನಗಳು)

## ಪೀಠಿಕೆ

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಮಗಾರಿಗಳನ್ನು (ಕಾಡಾ) ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ನೀರುಬಳಕೆದಾರರ ಸಹಕಾರ ಸಂಘಗಳ ಮೂಲಕ ಈ ಕಾಮಗಾರಿಗಳನ್ನು ಅನುಷ್ಠಾನ ಮಾಡುವುದು ಈ ಯೋಜನೆಯ ವೈಶಿಷ್ಟ್ಯ. ಸಂಘಗಳು ಇದರ ಸದುಪಯೋಗಪಡಿಸಿಕೊಂಡು ನೀರಾವರಿ ಆಸ್ತಿಗಳನ್ನು ನಿರ್ಮಿಸಿಕೊಳ್ಳಬೇಕು ಹಾಗೂ ತಮ್ಮ ಅಚ್ಚುಕಟ್ಟು ಪ್ರದೇಶದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಯೋಜನೆಯ ಆಶಯವಾಗಿದೆ.

ಕಾಡಾ ಕಾಮಗಾರಿಗಳಲ್ಲಿ ಮುಖ್ಯವಾಗಿ ಹೊಲಗಾಲುವೆ (ಸ್ಥಳೀಯವಾಗಿ ಮಡಿಕಾಲುವೆ/ಸೀಳುಗಾಲುವೆ ಎನ್ನುತ್ತಾರೆ), ಗಾಡಿಸೇತುವೆ ಇತ್ಯಾದಿ ರಚನೆಗಳು ಬರುತ್ತವೆ. ಜೊತೆಗೆ ಪ್ರತಿಯೊಂದು ನೀರು ಬಳಕೆದಾರರ ಸಹಕಾರ ಸಂಘಕ್ಕೆ ಮತ್ತು ಒಕ್ಕೂಟಕ್ಕೆ ಸ್ವಂತಕಟ್ಟಡ ನಿರ್ಮಿಸಿಕೊಳ್ಳಲು ಅವಕಾಶವಿದೆ.

ಎಡಿಬಿ ನಿಯಮಗಳು ಮತ್ತು ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯ ನಿಯಮಾವಳಿಗಳ ಪ್ರಕಾರ, 23ಲಕ್ಷ ಅಥವಾ ಅದಕ್ಕಿಂತ ಕಡಿಮೆ ಮೊತ್ತದ ಕಾಡಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ನೀರು ಬಳಕೆದಾರರ ಸಹಕಾರ ಸಂಘಗಳೊಂದಿಗೆ ನೇರವಾಗಿ ಒಪ್ಪಂದ ಮಾಡಿಕೊಳ್ಳಬಹುದು. ಅದರಂತೆ, ಕಾರ್ಯನಿರ್ವಾಹಕ ಇಂಜಿನಿಯರ್, ಯೋಜನಾ ಅನುಷ್ಠಾನ ಕಛೇರಿ, ಕರ್ನಾಟಕ ನೀರಾವರಿ ನಿಗಮ ಲಿಮಿಟೆಡ್ (ಕೆಎನ್ಎನ್ಎಲ್) ಮತ್ತು ನೀ.ಬ.ಸ.ಸಂ.ಗಳ ನಡುವೆ ನೇರ ಒಡಂಬಡಿಕೆ ಮಾಡಿಕೊಳ್ಳಲಾಗುವುದು. ಆಮೂಲಕ ಕಾಡಾ ಕಾಮಗಾರಿ ಅನುಷ್ಠಾನ ಕಾರ್ಯಗಳನ್ನು ಸಂಘಗಳಿಗೆ ವಹಿಸಲಾಗುವುದು. ಈ ಒಡಂಬಡಿಕೆ ಪ್ರಕಾರ, ಕಾಡಾ ಕಾಮಗಾರಿಗಳನ್ನು ಸಂಘಗಳ ಮೂಲಕ ಕಾರ್ಯಗತಗೊಳಿಸಬೇಕು ಮತ್ತು ಪ್ರತಿ ಸಂಘಕ್ಕೆ ಕನಿಷ್ಠ 10 ಪ್ಯಾಕೇಜುಗಳನ್ನು ನೀಡಲಾಗುವುದು. ಪ್ರತಿ ಪ್ಯಾಕೇಜ್ ಒಪ್ಪಂದವು ರೂ.23 ಲಕ್ಷ ಮೊತ್ತಕ್ಕಿಂತ ಹೆಚ್ಚಿರುವುದಿಲ್ಲ.





## ಮಡಿಗಾಲುವೆ ಕಾಮಗಾರಿ ಆರಂಭಿಸುವ ಮೊದಲು ಅನುಸರಿಸಬೇಕಾದ ಕ್ರಮಗಳು

- ಕಾಲುವೆ ಮತ್ತು ಕಟ್ಟಡಗಳ ನಕ್ಷೆಗಳನ್ನು ನಿಗಮ ಅಥವಾ ಇಜಿಐಎಸ್ ಇಂಜಿನಿಯರುಗಳಿಂದ ಪಡೆದು ಸಿದ್ಧಪಡಿಸಿಕೊಳ್ಳಬೇಕು;
- ಕಾಲುವೆಯಲ್ಲಿ ನೀರು ಬಿಡುವ ವೇಳಾಪಟ್ಟಿಯನ್ನು ನಿರ್ಣಯಿಸಿ, ಅದಕ್ಕೆ ಅನುಗುಣವಾಗಿ ಕ್ಯಾಡ್ ಪ್ಯಾಕೇಜ್‌ಗಳ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಹಾಗೂ ಇದರ ಬಗ್ಗೆ ಆಯಾಭಾಗದ ರೈತರೊಂದಿಗೆ ಚರ್ಚಿಸಿ ನಿರ್ಧರಿಸಬೇಕು;
- ಕಾಲ್ನಡಿಗೆ ಸಮೀಕ್ಷೆಯ ಮೂಲಕ ಕಾಲುವೆಗಳನ್ನು ಗಮನಿಸಿ ಎಲ್ಲಿ, ಎಷ್ಟು ಪ್ರಮಾಣದ, ಎಷ್ಟು ಉದ್ದದ ಅಥವಾ ಯಾವ ರೀತಿಯ ಕಾಮಗಾರಿ ಅಗತ್ಯವಿದೆ ಎಂಬುದನ್ನು ನಿರ್ಧರಿಸಬೇಕು;
- ನಿರ್ಮಾಣ ಸಾಮಗ್ರಿಗಳ ಸಂಗ್ರಹಣೆಗಾಗಿ ಸೂಕ್ತ ಸ್ಥಳಗಳನ್ನು ಗುರುತಿಸಬೇಕು.

## ಖರೀದಿ ಪ್ರಕ್ರಿಯೆ ನಿಯಮಾವಳಿಗಳು

ಎ.ಡಿ.ಬಿ ನಿಯಮದಂತೆ ಪ್ರತಿಯೊಂದು ನೀರು ಬಳಕೆದಾರರ ಸಹಕಾರ ಸಂಘವು ಮಡಿಗಾಲುವೆ ಮತ್ತು ಸಂಘದ ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಮತ್ತು ಕಾಮಗಾರಿ ಪ್ರಗತಿಯ ಪ್ರತಿಯೊಂದು ಹಂತದಲ್ಲಿ ಕಾಮಗಾರಿಗೆ ಅವಶ್ಯವಾದ ಸರಕು ಹಾಗೂ ಸೇವೆಗಳನ್ನು ಹೊಂದಲು ಈ ಕೆಳಗಿನಂತೆ ಖರೀದಿ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಬೇಕಾಗಿದೆ.

## ಕೊಟೇಷನ್ ಪಡೆಯುವ ಪ್ರಕ್ರಿಯೆ

- ಸಂಘಗಳು ಸದಸ್ಯರ ಸಭೆ ಮಾಡಿ ಕಾಡಾ ಕಾಮಗಾರಿಗಳನ್ನು ಪ್ರಾರಂಭಿಸಲು ತೀರ್ಮಾನಿಸಬೇಕು ಮತ್ತು ಸೂಕ್ತ ನಡವಳಿಯನ್ನು ಮಾಡಬೇಕು;
- ಕಾಮಗಾರಿ ಪ್ರಾರಂಭಿಸುವ ಮುನ್ನ ಜಿ.ಎಸ್.ಟಿ ಸಂಖ್ಯೆ ಹೊಂದಿರುವ ಕನಿಷ್ಠ 3 ಅಂಗಡಿಗಳಿಗೆ/ಪೂರೈಕೆದಾರರಿಗೆ ಪ್ರತಿಯೊಂದು ಸಾಮಗ್ರಿಗೂ (ಸಿಮೆಂಟ್, ಜಲ್ಲಿ, ಮರಳು, ಕಬ್ಬಿಣ, ಬಾಗಿಲು-ಕಿಟಕಿಗೆ ಬೇಕಾದ ಮರಮಟ್ಟುಗಳು ಅಥವಾ ಕಬ್ಬಿಣ, NP3 ಪೈಪ್, ಎಲೆಕ್ಟ್ರಿಕ್ ಸಾಮಾಗ್ರಿಗಳು, ನೀರಿನ ಟ್ಯಾಂಕರ್ ಸೇರಿದಂತೆ ನೀರು ಪೂರೈಕೆ ಸಾಮಾಗ್ರಿಗಳು, ಸಾನಿಟರಿ ಸಾಮಾಗ್ರಿಗಳು, ಇತ್ಯಾದಿ) ಕೊಟೇಷನ್‌ಗಳನ್ನು ಸಂಘದ ಹೆಸರಿನಲ್ಲಿ ಕೊಡುವಂತೆ ಸಂಘದ ಲೆಟರ್‌ಹೆಡ್‌ನಲ್ಲಿ ಮನವಿಪತ್ರ ಸಲ್ಲಿಸಿ ಕೊಟೇಷನ್‌ಗಳನ್ನು ತೆಗೆದುಕೊಳ್ಳಬೇಕು;
- ಅಂಗಡಿ/ಪೂರೈಕೆದಾರರಿಂದ ಕೊಟೇಷನ್ ಪಡೆದುಕೊಂಡ ನಂತರ ಮತ್ತೆ ಸಂಘದ ಆಡಳಿತ ಮಂಡಳಿ ಸಭೆ ನಡೆಸಿ ಕೊಟೇಷನ್‌ಗಳ ಬಗ್ಗೆ ಚರ್ಚಿಸಿ, ಅವರು ನಮೂದಿಸಿರುವ ದರಗಳನ್ನು ವಿಶ್ಲೇಷಿಸಿ ಕಡಿಮೆ ದರದಲ್ಲಿ ಉತ್ತಮಗುಣಮಟ್ಟದ ಸಾಮಗ್ರಿಗಳನ್ನು ಪೂರೈಸಲು ಒಪ್ಪಿರುವವರಿಂದ ಖರೀದಿಸಲು ತೀರ್ಮಾನಿಸುವುದು;
- ನಂತರ ಆಯ್ಕೆ ಮಾಡಿದ ಪೂರೈಕೆದಾರರಿಗೆ ಅಗತ್ಯ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಸಂಘದಿಂದ ಪತ್ರ ಬರೆಯುವುದು;
- ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದ ನಮೂನೆ/ಫಾರಂಗಳನ್ನು ಇ.ಜಿ.ಐ.ಎಸ್ ನ ಸಮುದಾಯ ಸಂಘಟಕರಿಂದ ಪಡೆಯುವುದು.

## ರಸೀದಿ ಪಡೆಯುವುದು ಮತ್ತು ನಿರ್ವಹಣೆ

- ಖರೀದಿಸಿದ ಪ್ರತಿ ಸಾಮಗ್ರಿಗಳಿಗೂ ಸೂಕ್ತ ರಸೀದಿ (ಬಿಲ್)ಗಳನ್ನು ಪಡೆಯಬೇಕು;
- ಪ್ರತಿ ರಸೀದಿಯನ್ನು ಸಂಘದ ಹೆಸರಿನಲ್ಲಿಯೇ ಪಡೆಯಬೇಕು;
- ಸದರಿ ರಸೀದಿಗಳನ್ನು ಪ್ಯಾಕೇಜ್‌ವಾರು ಕ್ರಮಬದ್ಧವಾಗಿ ನಿರ್ವಹಣೆ ಮಾಡಬೇಕು;
- ಕಾಮಗಾರಿಗೆ ಸಂಬಂಧಿಸಿದ ಪ್ರತಿ ವ್ಯವಹಾರವನ್ನು ಸಂಘದ ಹೆಸರಿನಲ್ಲಿಯೇ ಮಾಡಬೇಕು;
- ಸಂಘಗಳು ತಮ್ಮ ಬ್ಯಾಂಕ್ ಖಾತೆಯಿಂದ ಡಿ.ಡಿ., ಚೆಕ್, ಆರ್‌ಟಿಜಿಎಸ್ ಅಥವಾ ಎನ್‌ಇಎಫ್‌ಟಿ ಮೂಲಕ ವ್ಯವಹಾರ ಮಾಡುವುದು ಕಡ್ಡಾಯ;
- ಪಾವತಿಯು ರೂ.2000 ಮೊತ್ತಕ್ಕಿಂತ ಕಡಿಮೆ ಇದ್ದಾಗ ಮಾತ್ರ ನಗದು/ಕ್ಯಾಷ್ ವ್ಯವಹಾರ ಮಾಡತಕ್ಕದ್ದು. ರೂ.2000ಕ್ಕೂ ಹೆಚ್ಚಿನ ಪಾವತಿಗಳನ್ನು ಸಂಘದ ಚೆಕ್ ಮುಖಾಂತರವೇ ಮಾಡುವುದು;
- ಎಲ್ಲಾ ಕಡತಗಳು, ಲೆಡ್ಜರುಗಳು ಹಾಗೂ ದಾಖಲಾತಿಗಳಿಗೆ ಪ್ರತ್ಯೇಕ ಪುಸ್ತಕವನ್ನು ನಿರ್ವಹಿಸುವುದು, ಈ ಪುಸ್ತಕಗಳನ್ನು ನಿಗಮದ ಅಥವಾ ಅದರ ಅಧಿಕೃತ ಅಧಿಕಾರಿಗಳು ಪರಿಶೀಲನೆಗಾಗಿ ಕೇಳಿದಾಗ ಲಭ್ಯವಾಗುವಂತೆ ನಿರ್ವಹಿಸಬೇಕು;
- ಸಾಮಗ್ರಿಗಳನ್ನು ಸಂಗ್ರಹಿಸುವ ದಿನಾಂಕವಾರು ವಹಿವಾಟನ್ನು ತೋರಿಸುವ ವಿಶೇಷ ಲೆಡ್ಜರ್ ಅನ್ನು ಪ್ರತ್ಯೇಕವಾಗಿ ಬರೆದು ನಿರ್ವಹಿಸಬೇಕು.

## ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು

ಸಾಮಗ್ರಿಗಳನ್ನು ಖರೀದಿಸಲು ಮೇಲೆ ತಿಳಿಸಿದ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವಂತೆ ಕಾಮಗಾರಿ ಅನುಷ್ಠಾನಕ್ಕೆ ಕಾರ್ಮಿಕರನ್ನು ತೆಗೆದುಕೊಳ್ಳುವಾಗಲೂ ಹಲವು ನಿಯಮಗಳನ್ನು ಮತ್ತು ಮುನ್ನೆಚ್ಚರಿಕೆಗಳನ್ನು ಪಾಲಿಸುವುದು ಅವಶ್ಯ:

- 18 ವರ್ಷಕ್ಕಿಂತ ಚಿಕ್ಕಮಕ್ಕಳನ್ನು ಕಾಮಗಾರಿ ಕೆಲಸಕ್ಕೆ ತೆಗೆದುಕೊಳ್ಳುವಂತಿಲ್ಲ;
- ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ಸಮಾನವೇತನ ನೀಡಬೇಕು;